# ಜಪಾನ್

## ಲವ್ ಇನ್ ಬೆಂಗಳೂರು!

■ ವಿಕ್ರಂ ಕಾಂತಿಕೆರೆ






ಜಪಾನ್ ಹಬ್ಬ

ಕಜುಮಸ ಕುಬೊಕಿ ಅವರಿಗೆ ಕನ್ನಡ ಭಾಷೆ ಕಬ್ಬಿಣದ ಕಡಲೆಯಾಗಿತ್ತು ಬೆಂಗಳೂರಿಗೆ ಕಾಲೂರುವಾಗ. ಆದರೆ ಒಂದೂವರೆ ದಶಕದಿಂದ ಇಲ್ಲೇ 'ಮನೆ' ಮಾಡಿರುವ ಅವರಿಗೆ ಈಗ ಕನ್ನಡವೇ ಕಸ್ತೂರಿ, ಕರ್ನಾಟಕವೇ ಐಸಿರಿ..

ಭಾರತ ಪ್ರವಾಸಕ್ಕೆ ಬಂದು ಬೆಂಗಳೂರಿನಲ್ಲಿ ಇಳಿದ ಕೂಡಲೇ ಇಲ್ಲಿನ ಪ್ರಕೃತಿ, ಪರಿಸರದ ಮೋಹಪಾಶದಲ್ಲಿ ಸಿಲುಕಿದ ಮೇಗುಮಿ ಸಕಕಿದ ಈಗ ಇಲ್ಲಿನ ಸೊಸೆ. ಕನ್ನಡಿಗ ದೀಪಕ್ ಅವರನ್ನು ವಿವಾಹವಾಗಿರುವ ಮೇಗುಮಿ ಅವರಿಗೆ ಸದ್ಯ ಉದ್ಯಾನ ನಗರಿಯೇ ಟೋಕಿಯೋ; ಕರ್ನಾಟಕವೇ ಸ್ವರ್ಗ.

ಕಜುಮಸ ಕುಬೊಕಿ 'ನನೂ ಕಣ್ಣಡ ಮತನಾಡುತ್ತೆನೆ' ಎಂದು ಹೇಳುತ್ತಲೇ 'ಹುಟ್ಟಿದರೇ ಕಣ್ಣಡ ನಾಡಲಿ ಹುಟ್ಟಬೇಕು...' ಎಂದು ಹಾಡಲು ತೊಡಗುತ್ತಾರೆ. ಮೇಗುಮಿ ಸಕಕಿದ ಕನ್ನಡದಲ್ಲೇ ವ್ಯವಹರಿಸುತ್ತಾರೆ.

ವಾಹನ ಮತ್ತು ವಾಹನಗಳ ಬಿಡಿಭಾಗಗಳ ತಯಾರಿಕೆಗೆ ಹೆಸರಾಗಿರುವ ಜಪಾನಿ ಕಂಪೆನಿಗಳು ಬೆಂಗಳೂರಿನಲ್ಲಿ ನೆಲೆಯೂರಲು ಆರಂಭವಾದಾಗಿನಿಂದ ಇಲ್ಲಿ ಬಂದು ವಾಸಿಸುತ್ತಿರುವ ಜಪಾನಿಯರ ಸಂಖ್ಯೆ ಹೆಚ್ಚಿದೆ. ಇಲ್ಲಿನ ವಾತಾವರಣ, ಸಂಸ್ಕೃತಿಗೆ ಹೊಂದಿಕೊಂಡಿದ್ದಾರೆ. ಅವರಿಗೆ ನಿಜವಾಗಿಯೂ 'ಬೆಂಗಳೂರಿನ್ ಮೇಲೆ ಪ್ಯಾರ್ ಆಗೈತೆ'. ಅಥವಾ ಶಮ್ಮಿ ಕಪೂರನ ಹಳೇ ಸಿನಿಮಾದ ಹಾಡಿನಂತೆ, 'ಜಾಪಾನ್... ಲವ್ ಬೆಂಗಳೂರು...' ಆಗೈತೆ.

ಬೆಂಗಳೂರಿಗೆ ಜಗತ್ತಿನಾದ್ಯಂತ ಜನ ಬರುತ್ತಾರೆ. ಬರೀ ನೋಡಲು ಬರುವುದೇ ಅಲ್ಲ, ಇಲ್ಲೇ ದುಡಿಯಲು ಬರುತ್ತಿದ್ದಾರೆ. ದುಡಿಯಲು ಮಾತ್ರವಲ್ಲ, ದುಡಿದ ಬಳಿಕ ಇಲ್ಲೇ ನೆಲೆಸಲೂ ಮನಸ್ಸು ಮಾಡುತ್ತಿದ್ದಾರೆ. ಗುಡ್ಡ, ಬೆಟ್ಟ, ಕಣಿವೆ, ಜಲಪಾತಗಳನ್ನು ಹೊಂದಿರುವ ಮೋಹಕ ವಾತಾವರಣದ ಜೊತೆ ನಿಕಟ ನಂಟು ಇರುವ ಜಪಾನಿಯರಿಗೆ ಕರ್ನಾಟಕದಲ್ಲೂ ಅವೆಲ್ಲ ಹೇರಳವಾಗಿವೆ ಎನ್ನುವುದು ಗೊತ್ತು. ಸುಂದರ ಬೆಂಗಳೂರಿನಲ್ಲಿ ಅವರಿಗೆ 'ಹೋಮ್ ಸಿಕ್‌ನೆಸ್'ನ ಕಾಟವಿಲ್ಲ. ಉದ್ಯಾನಗಳಿಂದ ಸಿಂಗಾರಗೊಂಡಿರುವ ಈ ನಗರಿ ಅವರಿಗೆ ಹೋಮ್‌ಲಿ; ಲೈವ್‌ಲಿ.

ಜಪಾನ್ ಕಾನ್ಸುಲೇಟ್‌ನ ಮಾಹಿತಿ ಪ್ರಕಾರ, ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಒಟ್ಟು 1305ರಷ್ಟು ಇದ್ದ ಜಪಾನೀ ಕಂಪೆನಿಗಳ ಸಂಖ್ಯೆ ಈಗ ಶೇಕಡಾ ಐದರಷ್ಟು ಏರಿಕೆ ಕಂಡಿದೆ. ಭಾರತದಲ್ಲಿರುವ ಜಪಾನ್‌ನ ಒಟ್ಟು ಉದ್ಯಮಗಳ ಸಂಖ್ಯೆಯೂ ಎರಡು ವರ್ಷಗಳಲ್ಲಿ ಶೇಕಡಾ ಆರರಷ್ಟು ಏರಿಕೆ ಕಂಡಿದ್ದು ಈಗ 4,838 ಆಗಿದೆ.

ಬೆಂಗಳೂರಿನಲ್ಲಿ ನೆಲೆಸಿರುವ ಜಪಾನಿಯರ ಸಂಖ್ಯೆಯೂ ಹೆಚ್ಚಿದೆ. ಐದು ವರ್ಷಗಳ ಹಿಂದೆ 300ರಿಂದ 500ರಷ್ಟು ಇದ್ದ ಜಪಾನಿಯರ ಸಂಖ್ಯೆ ಈಗ 1300 ಮೀರಿದೆ. ಟೊಯೊಟಾ ಕಿರ್ಲೋಸ್ಕರ್, ಹೋಂಡಾ, ಫುಜಿತ್ಸು,